
## ನಿಮ್ಮೊಡನೆ

# ಜನತಂತ್ರದ ಚುಂಗೂ ರಾಜಪ್ರಭುತ್ವದ ಬೆಡಗೂ

ನಾವೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಗುಂಗಿನಲ್ಲಿದ್ದೇವೆ. ಆದರೆ, ಜನತಂತ್ರದ ಬೇರಿಗೆ ಗೆದ್ದಲು ಹತ್ತಿದೆ ಎಂಬುದು ನಮ್ಮ ಚುನಾವಣೆಗಳು ನಡೆಯುತ್ತಿರುವ ರೀತಿ ಎತ್ತಿ ತೋರಿಸುತ್ತಿದೆ. ವೋಟು ಎಂಬುದು ಖರೀದಿ ವಸ್ತುವಾಗಿ ಪರಿಣಮಿಸಿದೆ. ಜನಪ್ರತಿನಿಧಿಗಳಲ್ಲಿ ಪಾಳೆಗಾರಿಕೆ ಪ್ರವೃತ್ತಿ ಹೆಚ್ಚತೊಡಗಿದೆ.



ಈಶ್ವರ್

ನಮ್ಮ ಚುನಾಯಿತ ಪ್ರತಿನಿಧಿಗಳಲ್ಲಿ ಅನೇಕರಿಗೆ ಜನತಂತ್ರದ ಗಮ್ಮತ್ತಿಗಿಂತ ರಾಜಪ್ರಭುತ್ವದ ಬೆಡಗು ಬಲು ಇಷ್ಟ ಇದ್ದಂತಿದೆ. ಅವರ ಮಾತು–ವರಸೆ, ಬೇಡಿಕೆಗಳಲ್ಲಿ ಕಾಲಕಾಲಕ್ಕೆ ಅದು ವ್ಯಕ್ತವಾಗುತ್ತಲೇ ಇರುತ್ತದೆ. ತಾವು ಈ ನೆಲದ ವಾಸಿಗಳಲ್ಲ ಎಂಬಂತಿರುತ್ತದೆ ಅವರ ಗತ್ತು–ದರ್ಪ!

‘ವಿಐಪಿ ಸಂಸ್ಕೃತಿ’ ಎಂಬುದು ನಮ್ಮಲ್ಲಿ ರೇಜಿಗೆ ಹುಟ್ಟಿಸುವ ಹಂತಕ್ಕೇರಿ ಎಷ್ಟೋ ವರ್ಷಗಳಾಗಿವೆ. ಅದರ ಬಗ್ಗೆ ಜನಸಾಮಾನ್ಯರಲ್ಲಿ ವಿಪರೀತ ಸಿಟ್ಟಿದೆ. ಆದರೆ ಅದರ ಅರಿವೇ ಇಲ್ಲ ಎಂಬಂತೆ ನಮ್ಮ ಶಾಸಕ–ಸಂಸದರು ವಿಶೇಷ ಸವಲತ್ತು, ಮನ್ನಣೆಗಾಗಿ ಹಾತೊರೆಯುತ್ತಲೇ ಇರುತ್ತಾರೆ.

ಚುನಾಯಿತ ಪ್ರತಿನಿಧಿಗಳಿಗೆ ನಮ್ಮಲ್ಲಿ ವಿಪರೀತ ಅನ್ನಿಸುವಷ್ಟು ವಿಶೇಷ ಸೌಲಭ್ಯಗಳು ಈಗಾಗಲೇ ಇವೆ. ಆದರೆ, ಅವು ಅವರಿಗೆ ಸಂಪೂರ್ಣ ಸಮಾಧಾನ ನೀಡಿದಂತಿಲ್ಲ. ಬೇಡಿಕೆಗಳು ಹೊಸ ರೂಪವನ್ನು ಹೊತ್ತು ಬರುತ್ತಲೇ ಇರುತ್ತವೆ. ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ತಮ್ಮ ಕೈಯಲ್ಲೇ ಇರುವ ಅಧಿಕಾರವನ್ನು ಎಗ್ಗಿಲ್ಲದೆ ಬಳಸಿಕೊಳ್ಳುತ್ತಾ ಇರುತ್ತಾರೆ. ಈ ವಿಚಾರದಲ್ಲಿ ನಮ್ಮ ಶಾಸಕ–ಸಂಸದರಲ್ಲಿ ಭಿನ್ನಮತ, ಪಕ್ಷಭೇದ ಇಲ್ಲ.

ಶಾಸನಸಭೆಗಳಲ್ಲಿ ನಮ್ಮನ್ನು ಪ್ರತಿನಿಧಿಸುವವರ ಇಂತಹ ವರಸೆಗಳನ್ನು ನೋಡಿದಾಗ, ‘ತಮ್ಮನ್ನು ಚುನಾಯಿಸಿ ಕಳುಹಿಸಿದ ಜನ ಏನೆಂದುಕೊಂಡಾರು ಎಂಬ ಅಳುಕು, ನಾಚಿಕೆ ಇವರಲ್ಲಿ ಕಿಂಚಿತ್ತೂ ಉಳಿದಂತೆ ಇಲ್ಲವಲ್ಲ’ ಎಂದು ಯಾರಿಗಾದರೂ ಅನ್ನಿಸದಿರದು. ಇದಕ್ಕೆ ಕಾರಣಗಳನ್ನು ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಹುಡುಕಬೇಕಾಗಿದೆ. ನಾವೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಗುಂಗಿನಲ್ಲಿದ್ದೇವೆ. ಆದರೆ, ಜನತಂತ್ರದ ಬೇರಿಗೆ ಗೆದ್ದಲು ಹತ್ತಿದೆ ಎಂಬುದು ನಮ್ಮ ಚುನಾವಣೆಗಳು ನಡೆಯುತ್ತಿರುವ ರೀತಿ ಎತ್ತಿ ತೋರಿಸುತ್ತಿದೆ. ವೋಟು ಎಂಬುದು ಖರೀದಿ ವಸ್ತುವಾಗಿ ಪರಿಣಮಿಸಿರುವುದರಿಂದ ಜನಪ್ರತಿನಿಧಿಗಳಲ್ಲಿ ಪಾಳೆಗಾರಿಕೆ ಪ್ರವೃತ್ತಿ ಹೆಚ್ಚತೊಡಗಿದೆ.

ಈಚೆಗೆ ಅನಿರ್ದಿಷ್ಟ ಅವಧಿಗೆ ಮುಂದೂಡಲಾದ ವಿಧಾನಸಭೆ ಕಲಾಪದ ಒಂದು ಸಣ್ಣ ನಿದರ್ಶನ ನೋಡೋಣ. ಹೆದ್ದಾರಿ ಟೋಲ್ ಕೇಂದ್ರಗಳಲ್ಲಿ ತಮಗೆ ವಿಶೇಷ ಮನ್ನಣೆ ಇರಬೇಕು ಎಂದು ವಿಧಾನಸಭೆಯಲ್ಲಿ ಕೆಲವು ಶಾಸಕರು ಒತ್ತಾಯಿಸಿದರು. ‘ಟೋಲ್‌ಗಳಲ್ಲಿ ನಮ್ಮ ವಾಹನ ತಡೆದು ಗುರುತಿನ ಚೀಟಿ ಕೇಳುವುದೆಂದರೇನು?’ ಎಂದು ಒಬ್ಬರು ಪ್ರಶ್ನಿಸಿದ್ದಾಗಿ ವರದಿಯಾಗಿದೆ. ‘ಟೋಲ್‌ಗಳಲ್ಲಿ ನಮಗೆ ಗೌರವ ಸಿಗದಿದ್ದರೆ ಊರಿನ ಜನ ಏನಂದುಕೊಳ್ಳುತ್ತಾರೆ. ನಮ್ಮ ವಾಹನಗಳಿಗೆ ಎಂಎಲ್‌ಎ ಎಂಬ ಫಲಕ ಇದ್ದರೂ ವಾಹನದ ಕಿಟಕಿಯಲ್ಲಿ ಬಗ್ಗಿ ಬಗ್ಗಿ ನೋಡುತ್ತಾರೆ... ನಮ್ಮ ವಾಹನಗಳಿಗೆ ಪ್ರತ್ಯೇಕ ಪಥ ಮಾಡಲು ಸಾಧ್ಯವಿಲ್ಲದಿದ್ದರೆ ನಮಗೆ ಕೊಟ್ಟಿರುವ ಪಾಸ್ ಹಿಂದಕ್ಕೆ ಪಡೆಯಿರಿ’ ಎಂದು ಮತ್ತೊಬ್ಬ ಶಾಸಕರು ಆಗ್ರಹಿಸಿದ್ದಾರೆ.

ಈ ಒತ್ತಾಯಕ್ಕೆ ಸ್ಪಂದಿಸಿರುವ ಲೋಕೋಪಯೋಗಿ ಸಚಿವರು – ‘ಸಚಿವರು, ಶಾಸಕರು ಹಾಗೂ ಇತರ ಅತಿಗಣ್ಯ ವ್ಯಕ್ತಿಗಳಿಗೆ (ವಿಐಪಿ) ಸುಗಮವಾಗಿ ಸಂಚರಿಸಲು ಅನುಕೂಲ ಆಗುವಂತೆ ಟೋಲ್ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಿಕೊಡಲಾಗುವುದು’ ಎಂದು ಭರವಸೆ ನೀಡಿದ್ದಾರೆ. ಅಲ್ಲದೆ, ಆಂಬುಲೆನ್ಸ್ ಸಂಚಾರಕ್ಕೆ ಇರುವ ಪ್ರತ್ಯೇಕ ಲೇನ್‌ನಲ್ಲಿ ಶಾಸಕರು ಹಾಗೂ ಇತರ ವಿಐಪಿಗಳ ಸುಗಮ ಸಂಚಾರಕ್ಕೆ ಸಹ ಅವಕಾಶ ಕಲ್ಪಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು ಎಂದು ಹೇಳಿದ್ದಾರೆ.

ಟೋಲ್ ಕೇಂದ್ರಗಳಲ್ಲಿ ಸರತಿ ಸಾಲಿನಲ್ಲಿ ವಾಹನ ನಿಲ್ಲಿಸುವುದರಿಂದ ಶಾಸಕರ ಘನತೆಗೆ ಕುಂದು ಬರುವುದೇ? ಗುರುತಿನ ಚೀಟಿಯನ್ನು ಟೋಲ್ ಸಿಬ್ಬಂದಿ ಪರಿಶೀಲಿಸುವುದು ಅವಮಾನಕರವೇ? ಇಂತಹ ಪೊಳ್ಳು ಪ್ರತಿಷ್ಠೆಗಳಿಗೆ ಅಂಟಿಕೊಂಡಿರುವ ಶಾಸಕರಿಂದ ಘನವಾದುದನ್ನು ನಿರೀಕ್ಷಿಸುವುದಾದರೂ ಹೇಗೆ?

ಕೋವಿಡ್ ಸಾಂಕ್ರಾಮಿಕವು ಎಲ್ಲ ವರ್ಗದ ಜನರಿಗೂ ಬೇರೆ ಬೇರೆ ಬಗೆಯಲ್ಲಿ ಆಘಾತ ನೀಡಿದೆ. ಜನರನ್ನು ತೀವ್ರವಾಗಿ ಕಾಡುತ್ತಿರುವ ಸಮಸ್ಯೆಗಳು ಚರ್ಚೆಗೆ ಒಳಗಾಗಬೇಕಿತ್ತು. ಅದು ಬಿಟ್ಟು, ಟೋಲ್ ಕೇಂದ್ರಗಳಲ್ಲಿ ವಿಐಪಿಗಳಿಗೆ ಮನ್ನಣೆ ನೀಡುವ ವಿಷಯ ಕುರಿತ ಚರ್ಚೆಯಿಂದ ಜನಸಾಮಾನ್ಯರಿಗೆ ಆಗುವ ಪ್ರಯೋಜನ ಏನು?

ಬೆಂಗಳೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾದ ‘ಬಾಲಬ್ರೂಯಿ’ ಅತಿಥಿಗೃಹದ ಆವರಣದಲ್ಲಿ ಶಾಸಕರಿಗಾಗಿ ‘ಕಾನ್‌ಸ್ಟಿಟ್ಯೂಷನ್ ಕ್ಲಬ್’ ನಿರ್ಮಿಸುವ ಪ್ರಸ್ತಾವ ಕುರಿತು ಒಂದು ಕ್ಷಣ ಯೋಚಿಸಿ. ಈ ಕಟ್ಟಡ ನಿರ್ಮಿಸುವ ಉದ್ದೇಶದ ಹಿಂದೆ ಗಹನ ವಿಚಾರಗಳ ಚರ್ಚೆಗೆ ಅನುವಾಗಿಸುವ ಅಂಶವೂ ಇದೆಯಂತೆ. ನಮ್ಮ ಶಾಸನಸಭೆ ಕಲಾಪಗಳ ಚರ್ಚೆಯ ಗುಣಮಟ್ಟ ಹೇಗಿದೆ, ಎಲ್ಲಿಗೆ ಇಳಿದಿದೆ ಎಂಬುದಕ್ಕೆ ಹೆಚ್ಚಿನ ವಿವರಣೆ ಬೇಕಾಗಿಲ್ಲ. ಇನ್ನು ಕ್ಲಬ್‌ನಲ್ಲಿ ಕುಳಿತು ಚರ್ಚೆ ನಡೆಸುತ್ತಾರೆನ್ನುವುದು ನಂಬಿಕೆಗೆ ಅತೀತವಾದ ಮಾತು!

**■ ಎನ್‌. ಉದಯಕುಮಾರ್**